ಶಿವಮೊಗ್ಗ ನಗರ ಸಭೆ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿ

4395 (3940) : ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 1999 ರಿಂದ 2003ರ ವರೆಗೆ ಶಿವಮೊಗ್ಗ ನಗರಸಭೆ ವ್ಯಾಪ್ತಿಯಲ್ಲಿ ಎಷ್ಟು ಕಿ.ಮೀ. ರಸ್ತೆಗೆ ಡಾಂಬರೀಕರಣ, ಮರು ಡಾಂಬರೀಕರಣ ಹಾಗೂ ಅಲ್ಲಿ ಬಿಚಾವಣೆ ಕಾಮಗಾರಿ ಕೈಗೊಳ್ಳಲಾಗಿದೆ; (ವಿವರ ಒದಗಿಸುವುದು)

ಆ) ಮೇಲ್ಕಂಡ ಕಾಮಗಾರಿಗಳ ಒಟ್ಟು ಮೊತ್ತವೆಷ್ಟು;

ಇ) 2003 ಹಾಗೂ 2004ನೇ ಸಾಲಿನಲ್ಲಿ ಮೇಲ್ಕಂಡ ಯೋಜನೆಗೆ ನಗರಸಭೆ ವತಿಯಿಂದ ಆಯವ್ಯಯದಲ್ಲಿ ಮೀಸಲಾಗಿರಿಸಿರುವ ಮೊತ್ತವೆಷ್ಟು;

ಈ) ಪ್ರಸ್ತುತ ಸಾಲಿನಲ್ಲಿ ಎಷ್ಟು ಕಿ.ಮೀ. ರಸ್ತೆ ಡಾಂಬರೀಕರಣ, ಜಲ್ಲಿ ಬಿಚಾವಣೆ ಕಾಮಗಾರಿ ಹಮ್ಮಿಕೊಳ್ಳಲು ನಗರಸಭೆ ತೀರ್ಮಾನಿಸಿದೆಯೆ; (ವಿವರ ನೀಡುವುದು)

ಉ) ಈ ಕಾಮಗಾರಿಗಳು ಯಾವಾಗ ಪ್ರಾರಂಭವಾಗಲಿವೆ?

ಶ್ರೀ ಡಿ.ಕೆ. ಶಿವಕುಮಾರ್ ಸಚಿವರು (ನಗರಾಭಿವೃದ್ಧಿ ಸಚಿವರು):

ಅ) ಡಾಂಬರೀಕರಣ – 31 ಕಿ.ಮೀ.

ಮರು ಡಾಂಬರೀಕರಣ – 13.10 ಕಿ.ಮೀ.

ಜಲ್ಲಿ ಬಿಚಾವಣೆಗೆ – 93.95 ಕಿ.ಮೀ.

ವಿವರ ಲಗತ್ತಿಸಿದೆ.

ಆ) ಡಾಂಬರೀಕರಣಕ್ಕೆ – ರೂ. 110.40 ಲಕ್ಷ

ಮರು ಡಾಂಬರೀಕರಣಕ್ಕೆ – ರೂ. 36.19 ಲಕ್ಷ

ಜಲ್ಲಿ ಬಿಚಾವಣೆ – ರೂ. 140.92 ಲಕ್ಷ

ಇ) ರೂ. 1.45 ಕೋಟಿಗಳು

ಈ) ಪ್ರಸ್ತುತ ಸಾಲಿನಲ್ಲಿ ಡಾಂಬರೀಕರಣ – 53 ಕಿ.ಮೀ.

ಜಲ್ಲಿ ಬಿಚಾವಣೆ – 0.5 ಮಿ.ಮಿ. ಮಾಡಲು ಉದ್ದೇಶಿಸಲಾಗಿದೆ.

ಉ) ಕ್ರಮ ಸಂಖ್ಯೆ 4ರಲ್ಲಿ ತಿಳಿಸಿರುವ ಕಾಮಗಾರಿಗಳಿಗೆ ಟೆಂಡರ್ ಕರೆದಿದ್ದು, ಕಾರ್ಯಾದೇಶ ನೀಡುವ ಹಂತದಲ್ಲಿರುತ್ತದೆ. ಈ ಕಾಮಗಾರಿಗಳನ್ನು ಮಳೆಗಾಲ ಮುಗಿದ ನಂತರ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ.

ಶಿವಮೊಗ್ಗ ತಾಲ್ಲೂಕಿನ ಕೈದೊಟ್ಲು ಏತ ನೀರಾವರಿ ಹಾಗೂ ಹುರುಳಿ ಕಟ್ಟೆ ಕೆರೆ ನಿರ್ಮಾಣ ಯೋಜನೆ

4396 (3942) : ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ತಾಲ್ಲೂಕು ಉಂಬ್ಳೆಬೈಲು ಬಳಿ ಸರ್ಕಾರದ ವತಿಯಿಂದ ಪ್ರಾರಂಭಿಸಲು ಉದ್ದೇಶಿಸಿರುವ ಕೈದೊಟ್ಲು ಏತ ನೀರಾವರಿ ಹಾಗೂ ಹುರುಳಿಕಟ್ಟೆ ಕೆರೆ ನಿರ್ಮಾಣ ಯೋಜನೆ ಪ್ರಸ್ತಾವನೆ ಯಾವ ಹಂತದಲ್ಲಿರುತ್ತದೆ;

ಆ) ಯಾವಾಗ ಈ ಯೋಜನೆಗಳು ಪ್ರಾರಂಭವಾಗುವುವು (ವಿವರ ನೀಡುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):

ಅ) ಈ ಯೋಜನೆಗಳ ರೇಖಾ ಅಂದಾಜು ತಯಾರಿಸಿದ್ದು ಅದರಂತೆ ಕೈದೋಟ್ಲು ಏತ ನೀರವಾರಿ ಯೋಜನೆಯ ಅಂದಾಜು ರೂ: 300.00 ಲಕ್ಷ ಹಾಗೂ ಹುರುಳಿಕಟ್ಟೆ ಕೆರೆ ನಿರ್ಮಾಣದ ಯೋಜನೆಯ ಅಂದಾಜು ರೂ: 45.00 ಲಕ್ಷಗಳೆಂದು ಅಂದಾಜಿಸಲಾಗಿದೆ. ಈ ಯೋಜನೆಗಳು ಆಯವ್ಯಯದಲ್ಲಿ ಸೇರಿಲ್ಲದಿರುವುದರಿಂದ ಯೋಜನೆಗಳ ಬಗ್ಗೆ ಮುಂದಿನ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಕ್ಷೇತ್ರದ ಶಾಸಕರಿಗೆ ಹಾಗೂ ಲೋಕಸಭಾ ಸದಸ್ಯರಿಗೆ ಮನೆ ಒದಗಿಸುವುದು

4397 (3943) : ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕ್ಷೇತ್ರವನ್ನು ಪ್ರತಿನಿಧಿಸುವ ಶಾಸಕರುಗಳಿಗೆ ಹಾಗೂ ಲೋಕಸಭಾ ಸದಸ್ಯರುಗಳಿಗೆ ಅವರುಗಳ ಕ್ಷೇತ್ರವನ್ನು ಪ್ರತಿನಿಧಿಸುವ ಕೇಂದ್ರ ಸ್ಥಾನದಲ್ಲಿ ಮನೆ ನಿರ್ಮಾಣ ಮಾಡಿ ಕೊಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ?

ಆ) ಇದ್ದಲ್ಲಿ, ಮನೆ ನಿರ್ಮಾಣ ಕಾರ್ಯವನ್ನು ಯಾವಾಗ ಮಾಡಿಕೊಡಲಾಗುವುದು (ವಿವರ ನೀಡುವುದು)?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು):

ಅ) ಇಂತಹ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಪೊಲೀಸ್ ಇಲಾಖೆಯ ಸಿಬ್ಬಂದಿಗಳಿಗೆ ಹೆಚ್ಚುವರಿ ವೇತನ ನೀಡಿದಂತೆ ಕಾರಾಗೃಹ ಇಲಾಖೆಯ ಸಿಬ್ಬಂದಿಗಳಿಗೂ ನೀಡುವ ಬಗ್ಗೆ

4398 (5026) : ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ) : ಮಾನ್ಯ ಬಂದಿಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪೊಲೀಸ್ ಇಲಾಖೆಯ ಸಿಬ್ಬಂದಿಗಳಿಗೆ ಸರ್ಕಾರವು ಈಗಾಗಲೇ ಒಂದು ತಿಂಗಳ ಹೆಚ್ಚುವರಿ ವೇತನ ನೀಡುತ್ತಿರುವುದು ನಿಜವಲ್ಲವೇ?

ಆ) ಹಾಗಿದ್ದರೆ ಅಷ್ಟೆ ಸೂಕ್ಷ್ಮವಾದ ಹಾಗೂ ಜವಾಬ್ದಾರಿಯುತವಾದ ಕರ್ತವ್ಯ ನಿರ್ವಹಿಸುತ್ತಿರುವ ಕಾರಾಗೃಹಗಳ ಇಲಾಖೆಯ ಸಿಬ್ಬಂದಿಗಳಿಗೆ 15 ದಿವಸಗಳ ಹೆಚ್ಚುವರಿ ವೇತನ ನೀಡುತ್ತಿದ್ದು, ಈ ತಾರತಮ್ಯವನ್ನು ತೆಗೆದು ಹಾಕಿ ಪೊಲೀಸ್ ಇಲಾಖೆಯ ಸಿಬ್ಬಂದಿಗಳಿಗೆ ನೀಡುತ್ತಿರುವ ಒಂದು ತಿಂಗಳ ಹೆಚ್ಚುವರಿ ವೇತನವನ್ನು ನೀಡುವ ವ್ಯವಸ್ಥೆ ಮಾಡುವುದು ಯಾವಾಗ?